**Publication:** Sanjevani **Date:**22/06/18

# ಈಝಿ ಡ್ರೈವ್ ಬಿಡುಗಡೆ

ಬೆಂಗಳೂರು.ಜೂ.22–ಚೆನ್ನೈ ಮತ್ತು ಬೆಂಗಳೂರಿನಲ್ಲಿ ಏಕ ಕಾಲದಲ್ಲಿ ನೂತನ ಮೊಬೈಲ್ ಅಪ್ಲಿಕೇಷನ್ 'ಈಝಿ ಡ್ರೈವ್' ಬಿಡುಗಡೆ ಮಾಡಲಾಗಿದೆ. ನಗರ ಭಾಗಗಳಲ್ಲಿನ ಸುರಕ್ಷಿತ ಪ್ರಯಾಣ ಸಲುವಾಗಿ ಈ ಅಪ್ಲಿಕೇಷನ್ ಅಭಿವೃದ್ಧಿ ಪಡಿಸಲಾಗಿದೆ.

ಗ್ರಾಹಕರು ಸುಲಭ ರೀತಿಯಲ್ಲಿ ಈ ಅಪ್ಲಿಕೇಷನ್ ಮೂಲಕ ಕ್ಯಾಬ್ ಮತ್ತು ಡ್ರೈವರ್ ಇಬ್ಬರನ್ನೂ ಬಾಡಿಗೆಗೆ ತೆಗೆದುಕೊಳ್ಳಬಹುದಾಗಿದೆ. ಈಝಿ ಡ್ರೈವ್, ಆನ್‌ಲೈನ್ ಮೂಲಕ ಮತ್ತು ಆಟೊಮ್ಯಾಟಿಕ್ ಎಸ್‌ಎಂಎಸ್ ಕನ್ಫರ್ಮೇಷನ್ ಮೂಲಕ ಡ್ರೈವರ್‌ಗಳನ್ನು ಬಾಡಿಗೆಗೆ ತೆಗೆದುಕೊಳ್ಳಲು ಇರುವಂತಹ ದೇಶದ ಮೊಟ್ಟ ಮೊದಲ ಮೊಬೈಲ್ ಅಪ್ಲಿಕೇಷನ್ ಆಗಿದೆ.

ಕಳೆದ 9 ವರ್ಷಗಳಿಂದ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿರುವ ಸಂಸ್ಥೆಯು ಒಂದು ಲಕ್ಷಕ್ಕೂ ಅಧಿಕ ಗ್ರಾಹಕರು ಮತ್ತು 800ಕ್ಕೂ ಹೆಚ್ಚಿನ ಡ್ರೈವರ್‌ಗಳು ಮತ್ತು 100ಕ್ಕೂ ಅಧಿಕ ಕ್ಯಾಬ್ ಆಪರೇಟರ್ ಸಂಸ್ಥೆಗಳಿಗೆ ಅತ್ಯುತ್ತಮ ಸೇವೆಯನ್ನು ನೀಡುವ ತುಡಿತ ಹೊಂದಿದೆ..

ಗ್ರಾಹಕರ ಕಡೆಗೆ ಹೆಚ್ಚು ಆದ್ಯತೆ ನೀಡುತ್ತೇವೆ. ಗ್ರಾಹಕರು ಬಯಸಿದ ಸ್ಥಳಕ್ಕೆ ಸುರಕ್ಷಿತವಾಗಿ ಹಾಗೂ ತೃಪ್ತಿಕರ ರೀತಿಯಲ್ಲಿ ತಲುಪುವಂತೆ ಮಾಡುವ ಮೂಲಕ ಪ್ರತಿ ಬಾರಿ ತಮ್ಮ ಪ್ರಯಾಣಗಳಿಗೆ ನಮ್ಮ ಸಂಸ್ಥೆಯನ್ನೇ ಮೊದಲ ಆಯ್ಕೆ ಮಾಡಿಕೊಳ್ಳುವಂತೆ ಉತ್ತಮ ಸೇವೆಗಳನ್ನು ಒದಗಿಸುತ್ತೇವೆ ಎಂದು ಈಝಿ ಡ್ರೈವ್ ಟೂರ್ಸ್ ಆ್ಯಂಡ್ ಟ್ರಾವಲ್‌ನ ಸಂಸ್ಥಾಪಕ ಮತ್ತು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಆಗಿರುವ ಶ್ರೀರಾಮ್ ಪ್ರಶಾಂತ್